ಕರ್ನಾಟಕ ಸರ್ಕಾರ

ಸಂ: ಪಪೂಶಿಇ/ಇ-ಆಡಳಿತ/ಎಸ್‌ಎಟಿಎಸ್/2018-19

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರ,
ಬೆಂಗಳೂರು

## ಸುತ್ತೋಲೆ

ವಿಷಯ:- ಪದವಿ ಪೂರ್ವ ಶಿಕ್ಷಣ ಇಲಾಖೆಯ ಬೋಧಕ/ಬೋಧಕೇತರ ವೃಂದದ ಎಲ್ಲಾ ಸಿಬ್ಬಂದಿಗಳು ಆನ್‌ಲೈನ್ ಸೇವೆಗಳ ಲಭ್ಯತೆಗಾಗಿ ಎಸ್‌ಎಟಿಎಸ್ ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳುವ ಬಗ್ಗೆ.

ಉಲ್ಲೇಖ:- ಸರ್ಕಾರದ ಆದೇಶ ಸಂಖ್ಯೆ: ಇಡಿ02/ಡಿಪಿಆರ್/2019/ದಿನಾಂಕ: 07-01-2019.

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ, ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಕಛೇರಿಗಳ, ರಾಜ್ಯ ಮಟ್ಟದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ಸೂಚನೆ.

ಎಸ್‌ಎಟಿಎಸ್ Students Achievement Tracking System(SATS) ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ತಮ್ಮನ್ನು ನೋಂದಾಯಿಸಿಕೊಳ್ಳಲು ಈ ಮೂಲಕ ಸೂಚಿಸಿದೆ. ಸಂಬಂಧಪಟ್ಟ sts.karnataka.gov.in/PUEEDS ಲಿಂಕನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಅಂತರ್ಜಾಲದಲ್ಲಿ ಒದಗಿಸಲಾಗಿದೆ, ಸದರಿ ಲಿಂಕ್‌ನಲ್ಲಿ **"New User Registration"** ನ್ನು ಕ್ಲಿಕ್ ಮಾಡಿ ವಿವರಗಳನ್ನು ಭರ್ತಿ ಮಾಡಿ ತಾವೆಲ್ಲರೂ ನೋಂದಾಯಿಸಿಕೊಳ್ಳಲು ತಿಳಿಸಿದೆ. ಇಲಾಖೆಯ ಆನ್‌ಲೈನ್ ಸೇವೆಗಳನ್ನು ಪಡೆಯಲು ನೋಂದಾವಣೆ ಕಡ್ಡಾಯವಾಗಿರುವುದರಿಂದ ತಪ್ಪದೇ ಸದರಿ ಲಿಂಕನ್ನು ಬಳಸಿ ಎಲ್ಲಾ ಸಿಬ್ಬಂದಿಗಳು ನೋಂದಣಿಯನ್ನು ಮಾಡಿಕೊಳ್ಳಲು ಸೂಚಿಸಿದೆ.

ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ.

18/6/2019.

ಜಂಟಿ ನಿರ್ದೇಶಕರು (ಆಡಳಿತ)
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಆಪ್ತ ಶಾಖೆಗೆ ಮಾಹಿತಿಗಾಗಿ.
2. ಜಂಟಿ ನಿರ್ದೇಶಕರು (ಶೈಕ್ಷಣಿಕ, ಆಡಳಿತ, ಮಾನ್ಯತೆ ಮತ್ತು ಅನುದಾನ, ಪರೀಕ್ಷೆ) ಇವರ ಮಾಹಿತಿಗಾಗಿ.
3. ಸಹಾಯಕ ನಿರ್ದೇಶಕರು, ಲೆಕ್ಕಪತ್ರ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಮಾಹಿತಿಗಾಗಿ.
4. ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ ತಮ್ಮ ಜಿಲ್ಲಾ ಹಂತದಲ್ಲಿ ಬರುವ ಕಾಲೇಜು ಹಾಗೂ ಕಛೇರಿಗಳ ನೊಂದಣಿ ಮಾಡಿಸಲು ಸೂಚಿಸಿದೆ.
5. ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
6. ಕಛೇರಿ ಪ್ರತಿ